ಪ್ರಮಾಣಪತ್ರಕ್ಕೆ ಲಗತ್ತು

ದಿನಾಂಕ**: 10.03.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

ಮುಂದವರಿದ ಪಾಟೀ ಸವಾಲು ವಾದಿ ಪರ ಶ್ರೀ ಎಂ ಬಿ ಎಲ್ ವಕೀಲರಿಂದಃ-

ಎಸ್.ಮುನಿಯಪ್ಪ ಮತ್ತು ಆತನ ಮಕ್ಕಳಿಂದ ನನ್ನ ತಂದೆ ಹೌಸ್ ಲಿಸ್ಟ್ ನಂ.**40, 41** ಹಾಗೂ **42** ನ್ನು ಖರೀದಿ ಮಾಡಿರುತ್ತಾರೆ. ಯಾವ ಯಾವ ಹೌಸ್ ಲಿಸ್ಟ್ ನ ವಿಸ್ತೀರ್ಣ ಎಷ್ಟು ಇದೆ ಎಂದರೆ ಸಾಕ್ಷಿ **06** ಹೌಸ್ ಲಿಸ್ಟ್ ಗಳಿಂದ ಪೂ-ಪಃ**125** ಅಡಿ, ಉ-ದಃ**137** ಅಡಿ ಇದೆ ಎಂದು ಹೇಳುತ್ತಾರೆ. ಸದರಿ ವಿಸ್ತೀರ್ಣವನ್ನು ನಿ.ಡಿ.**2** ರಲ್ಲಿ ನಮೂದು ಮಾಡಿರುವುದರ ಬಗ್ಗೆ ನನಗೆ ಗೊತ್ತಿಲ್ಲ. ನಿ,ಡಿ.**2** ರಲ್ಲಿ ದಕ್ಷಿಣಕ್ಕೆ ಪಂಚಾಯ್ತಿ ರಸ್ತೆ ಎಂದು ಇದೆ ಎಂದರೆ ಸಾಕ್ಷಿ **08** ಅಡಿ ರಸ್ತೆ ಇದೆ ಎಂದು ಹೇಳುತ್ತಾರೆ. ನಿ.ಡಿ.**2** ರಲ್ಲಿ **08** ಅಡಿ ರಸ್ತೆ ಎಂದು ನಮೂದು ಮಾಡಲಾಗಿರುತ್ತದೆ. ನಿ.ಡಿ.**2** ರಲ್ಲಿ ಪಶ್ಚಿಮಕ್ಕೆ ಹೆಚ್ ಹನುಮಂತಪ್ಪ ರವರ ನಿವೇಶನ ಎಂದು ನಮೂದಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ದಿಃ**02.06.1993** ರಂದು ಹೆಚ್ ಎಲ್ ನಂ.**41** ರ ಸ್ವತ್ತನ್ನು ತಮ್ಮಣ್ಣ ಎನ್ನುವವರಿಂದ ಖರೀದಿ ಮಾಡಿದ್ದಾರೆಂದರೆ ಸರಿ. ಸದರಿ ಮೂಲ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಲು ನನಗೆ ತೊಂದರೆ ಇಲ್ಲ. ಸದರಿ ಮೂಲ ಕ್ರಯ ಪತ್ರ ನನ್ನ ಬಳಿ ಇರುತ್ತದೆ ಅದನ್ನು ನಾನು ನ್ಯಾಯಲಯಕ್ಕೆ ಸಲ್ಲಿಸಿರುವುದಿಲ್ಲ. ಸದರಿ ಹೌಸ್ ಲಿಸ್ಟ್ ನಂ.**41** ರ ವಿಸ್ತೀರ್ಣ ಪೂ-ಪಃ**38** ಅಡಿ, ಉ-ದಃ**50** ಅಡಿ ಇರುತ್ತದೆಂದರೆ ಸರಿ. ಸದರಿ ಕ್ರಯ ಪತ್ರದಲ್ಲಿ ದಕ್ಷಿಣಕ್ಕೆ **12** ಅಡಿಗಳ ರಸ್ತೆ ಇದೆ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರದಲ್ಲಿ **12** ಅಡಿ ಇರುವ ಬಗ್ಗೆ ನಮೂದಾಗಿರುವುದರಿಂದ ಅದನ್ನು ನಾನು ಉದ್ದೇಶ ಪೂರ್ವಕವಾಗಿ ನಾನು ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಎಲ್ಲಾ ಹೌಸ್ ಲಿಸ್ಟ್ ಸ್ವತ್ತುಗಳನ್ನು ಈಗಾಗಲೇ ಒಂದುಗೂಡಿಸಿರುವುದರಿಂದ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದು ಹೇಳುತ್ತಾರೆ.

**2.** ನಾನು, ನನ್ನ ತಂದೆ ಮತ್ತು ಕೆಂಪೇಗೌಡ್ರ ಎನ್ನುವವರಿಗೆ ಮಂಜೂರಾಗಿದೆ ಎಂದು ಹೇಳುವ **02** ಹಕ್ಕು ಪತ್ರ ಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆಂದರೆ ಸರಿ. ಸದರಿ ಮಂಜೂರಾತಿ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಅದು ನನ್ನ ತಂದೆ ಮತ್ತು ಚಿಕ್ಕಪ್ಪನಿಗೆ

ಆಗಿದೆ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಸರ್ಕಾರದಿಂದ ನಿರಾಶ್ರಿತರಿಗೆ ಮಾತ್ರ ಹಕ್ಕು ಪತ್ರ ನೀಡಲಾಗುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ನಿ.ಡಿ.**5** ರಲ್ಲಿ ಪಶ್ಚಿಮಕ್ಕೆ ಮುನಿಯಪ್ಪ ಎಂದು ನಮೂದಾಗಿದೆ ಎಂದರೆ ಸರಿ. ನಿ,ಡಿ.**5** ಮತ್ತು **6** ರ ಮೂಲ ಹಕ್ಕು ಪತ್ರಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ನಿ.ಡಿ.**5** ಮತ್ತು **6** ಬಸವಯ್ಯ ಎನ್ನುವವರು ಪಿ ಡಿ ಓ ಆಗಿದ್ದ ಕಾಲದಲ್ಲಿ ನೀಡಿದ್ದ ದಾಖಲೆ ಆಗಿರುತ್ತದೆಂದರೆ ನನಗೆ ಗೊತ್ತಿಲ್ಲ. ನಿ.ಡಿ.**5** ಮತ್ತು **6** ನ್ನು ನಾವು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

**3.** ಹೆಚ್ ಎಲ್ ನಂ.**40, 41** ಹಾಗೂ **42** ನ್ನು ಕ್ರೋಢೀಕರಿಸಿ ಎಂದು ನನ್ನ ತಂದೆಯೇ ಪಂಚಾಯ್ತಿಗೆ ಅರ್ಜಿಯನ್ನು ನೀಡಿರುತ್ತಾರೆ. ಯಾವ ವರ್ಷದಲ್ಲಿ ಅರ್ಜಿಯನ್ನು ನೀಡಿದ್ದಾರೆಂದರೆ ಸಾಕ್ಷಿ **1990** ರಲ್ಲಿ ಇರಬಹುದು ಎಂದು ಹೇಳುತ್ತಾರೆ. ಸದರಿ ಹೌಸ್ ಲಿಸ್ಟ್ ಗಳನ್ನು **1990** ರಲ್ಲಿಯೇ ಕ್ರೋಢೀಕರಿಸಲಾಗಿದೆ. ಹಾಲಿ ಈಗ ಹೆಚ್ ಎಲ್ ನಂ.**41** ಮತ್ತು **42** ರ ಖಾತೆ ಮಹೇಂದ್ರ ಮತ್ತು ಚನ್ನೇಗೌಡ ಎನ್ನುವವರ ಹೆಸರಿನಲ್ಲಿದೆ. ಸದರಿ ಖಾತಾ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ.

**(ಪಾಟೀ ಸವಾಲಿಗೆ ವಾದಿ ಪರ ವಕೀಲರು ಹಾಜರಿದ್ದು ಕಾಲಾವಕಾಶ ಕೋರಿದ್ದು, ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.)**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.
ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.